**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 633 (789) |
| ಉತ್ತರಿಸಬೇಕಾದ ದಿನಾಂಕ | 10.03.2026 |
| ಉತ್ತರಿಸಬೇಕಾದ ಸಚಿವರು | ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

******

| ಕ್ರ. ಸಂ | **ಪ್ರಶ್ನೆ** | **ಉತ್ತರ** |
|---|---|---|
| ಅ) | ಕೊಪ್ಪಳ ಜಿಲ್ಲೆಯಲ್ಲಿ ಸ್ಥಾಪಿಸಲಾಗಿರುವ ಸ್ಪಾಂಜ್ ಐರನ್ ಉತ್ಪಾದನಾ ಘಟಕಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು). | ಕೊಪ್ಪಳ ತಾಲ್ಲೂಕಿನಲ್ಲಿ ಒಟ್ಟು 13 ಸ್ಪಾಂಜ್ ಐರನ್ ಮತ್ತು ಕಬ್ಬಿಣ ಉತ್ಪಾದನಾ ಕಾರ್ಖಾನೆಗಳಿದ್ದು, ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಸದರಿ ಸ್ಪಾಂಜ್ ಐರನ್ ಘಟಕಗಳಿಂದ ಹೊರ ಸೂಸುವ ಅಪಾಯಕಾರಿ ವಿಷಾನಿಲಗಳಿಂದ ಸುತ್ತಮುತ್ತಲಿನ ಗ್ರಾಮಸ್ಥರ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೊಪ್ಪಳ ತಾಲ್ಲೂಕು ವ್ಯಾಪ್ತಿಯಲ್ಲಿ ಕಾರ್ಯಾಚರಣೆಯಲ್ಲಿರುವ ಸ್ಪಾಂಜ್ ಐರನ್ ಘಟಕಗಳ ವಿರುದ್ಧ ಗ್ರಾಮಸ್ಥರು ಮತ್ತು ಸಾರ್ವಜನಿಕರಿಂದ ಧೂಳು, ಹೊಗೆ ಹಾಗು ವಾಯು ಮಾಲಿನ್ಯ, ಬೆಳೆ ಹಾನಿ ಮತ್ತು ಆರೋಗ್ಯ ಸಮಸ್ಯೆ/ಕಾಯಿಲೆ ಉಂಟಾಗುತ್ತಿರುವ ಹಾಗೂ ಜಾನುವಾರುಗಳು ಮತ್ತು ಪರಿಸರದ ಮೇಲೆ ಗಂಭೀರ ಪರಿಣಾಮಗಳಾಗುತ್ತಿರುವ ಬಗ್ಗೆ ಮಂಡಳಿಗೆ ನಿರಂತರವಾಗಿ ದೂರುಗಳು ದಾಖಲಾಗುತ್ತಿವೆ.<br><br>ಸದರಿ ದೂರುಗಳ ಹಿನ್ನಲೆಯಲ್ಲಿ,ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲೂಕಿನ ಹೀರೆಬಗನಾಳ ಗ್ರಾಮದ 5 ಕಿ.ಮಿ. ವ್ಯಾಪ್ತಿ ಪ್ರದೇಶದಲ್ಲಿ ಕಾರ್ಯಾಚರಣೆಯಲ್ಲಿರುವ 13 ಸ್ಪಾಂಜ್ ಐರನ್ ಘಟಕಗಳಿಗೆ, ಜಲ ಕಾಯ್ದೆ, 1974 ಮತ್ತು ವಾಯು ಕಾಯ್ದೆ, 1981ರ ಅಡಿಯಲ್ಲಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕೈಗೊಂಡಿರುವ ಕ್ರಮಗಳ ವಿವರಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. |
| ಇ) | ಸದರಿ ಕೈಗಾರಿಕೊದ್ಯಮಗಳು ಅನುಸರಿಸುತ್ತಿರುವ ಮಾಲಿನ್ಯ ನಿಯಂತ್ರಣ ಕ್ರಮಗಳ ಕುರಿತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ವಿಶೇಷ ತಂಡದ ವತಿಯಿಂದ ಪರಿಶೀಲನೆ ಮಾಡಲಾಗಿದೆಯೇ; ಮಾಡಿದ್ದಲ್ಲಿ, ಅದರ ವರದಿಯನ್ನು ಒದಗಿಸುವುದು; | ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, (MoEF&CC), ಬೆಂಗಳೂರು ಇವರು ಕೊಪ್ಪಳ ಜಿಲ್ಲೆಯಲ್ಲಿ ಕೈಗಾರಿಕೆಗಳ ಮಾಲಿನ್ಯ ತೀವ್ರತೆಯ ಪ್ರಭಾವವನ್ನು ಅಧ್ಯಯನ ಮಾಡುವ ಹಿನ್ನಲೆಯಲ್ಲಿ, ವಿವಿಧ ಇಲಾಖೆಯ ತಾಂತ್ರಿಕ ಅಧಿಕಾರಿಗಳ ತಂಡವನ್ನು ರಚಿಸಿ, ಕೊಪ್ಪಳ ತಾಲ್ಲೂಕು ವ್ಯಾಪ್ತಿಯಲ್ಲಿ ಕಾರ್ಯಾಚರಣೆಯಲ್ಲಿರುವ ಬೃಹತ್ ಕೈಗಾರಿಕೆಗಳನ್ನು ಪರಿವೀಕ್ಷಣೆ ನಡೆಸಿ, ಪರಿಸರ ಸಂಬಂಧಿತ ಸಮಸ್ಯೆಗಳು ಮತ್ತು ಸೂಕ್ತ ಪರಿಹಾರ ಕ್ರಮಗಳ ಬಗ್ಗೆ ಸಮಗ್ರ ವರದಿಯನ್ನು MoEF&CC ಇಲಾಖೆಗೆ ಸಲ್ಲಿಸುವಂತೆ ದಿನಾಂಕ:30.10.2024 ರಂದು ನಿರ್ದೇಶನ ನೀಡಿರುತ್ತದೆ. |

| | | |
|---|---|---|
| | | ಅದರಂತೆ, ದಿನಾಂಕ:11.12.2024 ರಿಂದ 13.12.2024ರ ವರೆಗೆ ಕೊಪ್ಪಳ ತಾಲ್ಲೂಕು ವ್ಯಾಪ್ತಿಯ ವಿವಿಧ 14 ಕೈಗಾರಿಕೆಗಳನ್ನು ತಾಂತ್ರಿಕ ತಂಡ ಪರಿವೀಕ್ಷಣೆ ನಡೆಸಿದ್ದು, ಸಮಗ್ರ ವರದಿಯ ಪ್ರತಿಯನ್ನು MoEF&CC ಹಾಗು ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಕೊಪ್ಪಳ ಕೈಗಾರಿಕಾ ಪ್ರದೇಶದಲ್ಲಿ ಪರಿಸರ ಸಂಬಂಧಿತ ಸಮಸ್ಯೆಗಳನ್ನು ನಿವಾರಿಸಲು, ಸ್ಪಾಂಜ್ ಐರನ್ ಘಟಕಗಳು ಅಳವಡಿಸಿಕೊಳ್ಳಬೇಕಾದ short- term ಮತ್ತು long-term ಕ್ರಮಗಳ ಬಗ್ಗೆ ಶಿಫಾರಸ್ಸನ್ನು ನೀಡಲಾಗಿರುತ್ತದೆ. |
| ಈ) | ವಿಶೇಷ ತಂಡದ ವತಿಯಿಂದ ಪರಿಶೀಲನೆ ಮಾಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; (ವಿವರ ಒದಗಿಸುವುದು); | ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, (MoEF&CC) ಈಗಾಗಲೇ ತಾಂತ್ರಿಕ ಅಧಿಕಾರಿಗಳು ಸಂಯೋಜಿತ ಪರಿವೀಕ್ಷಣೆಗೆ ನಡೆಸಿದ್ದು, ಪರಿಸರ ಸಂಬಂಧಿತ ಸಮಸ್ಯೆಗಳು ಮತ್ತು ಸೂಕ್ತ ಪರಿಹಾರ ಕ್ರಮಗಳ ಬಗ್ಗೆ ಸಮಗ್ರ ವರದಿಯನ್ನು ಸಲ್ಲಿಸಲಾಗಿರುತ್ತದೆ. |
| ಉ) | ಈ ವರದಿಯಲ್ಲಿ ಉಲ್ಲೇಖಿಸಿದಂತೆ ಪರಿಸರ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅನುಸರಿಸದೇ ಇರುವ ಕಂಪನಿಗಳ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು? (ವಿವರ ಒದಗಿಸುವುದು) | ಈಗಾಗಲೇ ಅನುಬಂಧ-2ರಲ್ಲಿ ತಿಳಿಸಿರುವಂತೆ ಮಾಲಿನ್ಯ ನಿಯಂತ್ರಣದಲ್ಲಿ ಲೋಪವೆಸಗಿದ ಸಂಸ್ಥೆಗಳ ವಿರುದ್ಧ ಕ್ರಮವಹಿಸಲಾಗಿದ್ದು, ತಾಂತ್ರಿಕ ಸಮಿತಿಯ ಶಿಫಾರಸ್ಸಿನನ್ವಯ ಖಾಸಗಿ ಸಂಸ್ಥೆಗಳು ಕೈಗೊಂಡ ಕ್ರಮದ ಕುರಿತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಪರಿಶೀಲಿಸಿ, ಕ್ರಮವಹಿಸಲಾಗುವುದು. |

**ಸಂಖ್ಯೆ:** ಅಪಜೀ 60 ಇಪಿಸಿ 2026

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

## <u>ಅನುಬಂಧ-1</u>

| ಕ್ರ ಸಂ | ಕೈಗಾರಿಕೆಯ ಹೆಸರು ಮತ್ತು ವಿಳಾಸ | ಕೈಗಾರಿಕೆಯ ವಿಧ | ತಾಲ್ಲೂಕು |
|---|---|---|---|
| 1 | ಮೆ. ತನುಷ್‌ಇಸ್ಪಾತ್ ಪ್ರೈವೇಟ್ ಲಿಮಿಟೆಡ್‌ಘಟಕ-೨,<br>ಹಿರೇಬಗನಾಳ, ತಾಲ್ಲುಕು ಮತ್ತು ಜಿಲ್ಲೆ-ಕೊಪ್ಪಳ. | ಸ್ಪಾಂಜ್ ಐರನ್ | ಕೊಪ್ಪಳ |
| 2 | ಮೆ. ತನುಷ್ ಇಸ್ಪಾತ್ ಪ್ರೈವೇಟ್ ಲಿಮಿಟೆಡ್‌ಘಟಕ-೧,<br>ಹಿರೇಬಗನಾಳ ಗ್ರಾಮ ತಾಲೂಕು ಮತ್ತು ಜಿಲ್ಲೆ-ಕೊಪ್ಪಳ | ಸ್ಪಾಂಜ್ ಐರನ್ | ಕೊಪ್ಪಳ |
| 3 | ಮೆ॥ ವನ್ಯಾ ಸ್ಟೀಲ್ ಪ್ರೈವೇಟ್ ಲಿಮಿಟೆಡ ಯುನಿಟ್-೧<br>ಹಿರೇಬಗನಾಳ ಗ್ರಾಮ ತಾಲೂಕು ಮತ್ತು ಜಿಲ್ಲೆ-ಕೊಪ್ಪಳ | ಸ್ಪಾಂಜ್ ಐರನ್ | ಕೊಪ್ಪಳ |
| 4 | ಮೆ॥ ವನ್ಯಾ ಸ್ಟೀಲ್ ಪ್ರೈವೇಟ್ ಲಿಮಿಟೆಡ ಯುನಿಟ್--೨,<br>ಹಿರೇಬಗನಾಳ ಗ್ರಾಮ ತಾಲೂಕು ಮತ್ತು ಜಿಲ್ಲೆ-ಕೊಪ್ಪಳ | ಸ್ಪಾಂಜ್ ಐರನ್ | ಕೊಪ್ಪಳ |
| 5 | ಮೆ॥ ಪಿ ಬಾಲ ಸುಬ್ಬ ಶೆಟ್ಟಿ ಪವರ್ & ಸ್ಟೀಲ್ ಲಿಮಿಟೆಡ ಘಟಕ-೧,<br>ಸ.ನಂ. ೬೩ ರಿಂದ ೬೬ ಹಾಲವರ್ತಿ ಗ್ರಾಮ ತಾಲೂಕು ಮತ್ತು ಜಿಲ್ಲೆ-ಕೊಪ್ಪಳ | ಸ್ಪಾಂಜ್ ಐರನ್ | ಕೊಪ್ಪಳ |
| 6 | ಮೆ॥ ಐ. ಎಲ್ ಸಿ ಐರನ್ & ಸ್ಟೀಲ್ ಲಿಮಿಟೆಡ್<br>ಕುಣಿಕೇರಿ ಗ್ರಾಮ ಕೊಪ್ಪಳ- ತಾಲೂಕು ಮತ್ತು ಜಿಲ್ಲೆ | ಸ್ಪಾಂಜ್ ಐರನ್ | ಕೊಪ್ಪಳ |
| 7 | ಮೆ॥ ಧ್ರುವದೇಶ್ ಮೆಟಾ ಸ್ಟೀಲ್ ಪ್ರೈವೇಟ್ ಲಿಮಿಟೆಡ್,<br>ಹಿರೇಬಗನಾಳ ಗ್ರಾಮ ತಾಲೂಕು ಮತ್ತು ಜಿಲ್ಲೆ-ಕೊಪ್ಪಳ | ಸ್ಪಾಂಜ್ ಐರನ್ | ಕೊಪ್ಪಳ |
| 8 | ಮೆ॥ ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್,<br>ಚಿಕ್ಕಬಗನಾಳ ಗ್ರಾಮ ತಾಲೂಕು ಮತ್ತು ಜಿಲ್ಲೆ-ಕೊಪ್ಪಳ | ಸ್ಪಾಂಜ್ ಐರನ್ | ಕೊಪ್ಪಳ |
| 9 | ಮೆ॥ ಎಸ್ ಕೆ ಸ್ಟೀಲ್ಸ್<br>ಹಾಲವರ್ತಿ ಗ್ರಾಮ ತಾಲೂಕು ಮತ್ತು ಜಿಲ್ಲೆ-ಕೊಪ್ಪಳ | ಸ್ಪಾಂಜ್ ಐರನ್ | ಕೊಪ್ಪಳ |

| ಕ್ರ ಸಂ | ಕೈಗಾರಿಕೆಯ ಹೆಸರು ಮತ್ತು ವಿಳಾಸ | ಕೈಗಾರಿಕೆಯ ವಿಧ | ತಾಲ್ಲೂಕು |
|---|---|---|---|
| 10 | ಮೆ\|\| ಭದ್ರ ಶ್ರೀ ಸ್ಟೀಲ್ಸ್ & ಪವರ್ ಲಿಮಿಟೆಡ್, ಕುಣಿಕೇರಿ ಗ್ರಾಮ ತಾಲೂಕು ಮತ್ತು ಜಿಲ್ಲೆ-ಕೊಪ್ಪಳ | ಸ್ಪಾಂಜ್ ಐರನ್ | ಕೊಪ್ಪಳ |
| 11 | ಮೆ\|\| ಹೆಚ್ ಆರ್ ಜಿ ಅಲಾಯ್ಸ್ & ಸ್ಟೀಲ್ ಲಿಮಿಟೆಡ್, ಹಿರೇಕಾಸನಕಂಡಿ ಗ್ರಾಮ ತಾಲೂಕು ಮತ್ತು ಜಿಲ್ಲೆ-ಕೊಪ್ಪಳ | ಸ್ಪಾಂಜ್ ಐರನ್ | ಕೊಪ್ಪಳ |
| 12 | ಮೆ\|\| ಪಿ ಬಾಲ ಸುಬ್ಬ ಶೆಟ್ಟಿ ಸ್ಟೀಲ್ ಲಿಮಿಟೆಡ್ ಘಟಕ-೨, (Unit of P Bala Subba Shetty & Son's) ಸ.ನಂ.. 48/5. 57/1–A, 57/4+6. 57/5+7. 62/1 to 62/4 . 62/6 & 62/7. ಹಾಲವರ್ತಿ ಗ್ರಾಮ ತಾಲೂಕು ಮತ್ತು ಜಿಲ್ಲೆ-ಕೊಪ್ಪಳ | ಸ್ಪಾಂಜ್ ಐರನ್ | ಕೊಪ್ಪಳ |
| 13 | ಮೆ. ಹೊಸಪೇಟ ಇಸ್ಪಾತ್ ಪ್ರೈವೇಟ್ ಲಿಮಿಟೆಡ್, ಸ.ನಂ೨, ಅಲ್ಲಾನಗರ, ತಾ&ಜಿ-ಕೊಪ್ಪಳ | ಸ್ಪಾಂಜ್ ಐರನ್ | ಕೊಪ್ಪಳ |

# ಅನುಬಂಧ-2

<table>
<tr><th>ಕ್ರ ಸಂ</th><th>ಕೈಗಾರಿಕೆಯ ಹೆಸರು ಮತ್ತು ವಿಳಾಸ</th><th>ಮಂಡಳಿಯಿಂದ ಕೈಗೊಂಡಿರುವ ಕ್ರಮಗಳ ವಿವರ</th></tr>
<tr><td>1</td><td>ಮೆ. ತನುಷ್ ಇಸ್ಪಾತ್ ಪ್ರೈವೇಟ್ ಲಿಮಿಟೆಡ್<br>ಘಟಕ-೧, ಹಿರೇಬಗನಾಳ ಗ್ರಾಮ, ಕೊಪ್ಪಳ ತಾಲೂಕು ಮತ್ತು ಜಿಲ್ಲೆ.</td><td rowspan="2">ಪರಿಸರ ಅಧಿಕಾರಿ, ಪ್ರಾದೇಶಿಕ ಕಚೇರಿ, ಕೊಪ್ಪಳ ರವರ ಪರಿವೀಕ್ಷಣಾ ವರದಿಗಳ ಪ್ರಕಾರ, ಸದರಿ 02 ಸ್ಪಾಂಜ್ ಐರನ್ ಕೈಗಾರಿಕೆಗಳು ಮಂಡಳಿಯು ನಿರ್ದಿಷ್ಟಪಡಿಸಿರುವ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅನುಪಾಲನೆ ಮಾಡುತ್ತಿರುವುದಾಗಿ ವರದಿಯಾಗಿರುತ್ತದೆ.</td></tr>
<tr><td>2</td><td>2. ಮೆ|| ಪಿ ಬಾಲ ಸುಬ್ಬ ಶೆಟ್ಟಿ ಸ್ಟೀಲ್ ಲಿಮಿಟೆಡ್<br>ಘಟಕ-೨, ಹಾಲವರ್ತಿ ಗ್ರಾಮ, ಕೊಪ್ಪಳ ತಾಲೂಕು ಮತ್ತು ಜಿಲ್ಲೆ.</td></tr>
<tr><td>3</td><td>ಮೆ|| ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್,<br>ಚಿಕ್ಕಬಗನಾಳ ಗ್ರಾಮ, ಕೊಪ್ಪಳ ತಾಲೂಕು ಮತ್ತು ಜಿಲ್ಲೆ</td><td rowspan="2">ಈ 02 ಕೈಗಾರಿಕೆಗಳು, ಸಮ್ಮತಿ ಪತ್ರದ ಕೆಲವು ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದರಿಂದ, ದಿನಾಂಕ: 02.12.2023 ರಂದು, ನೋಟೀಸ್ ಜಾರಿಮಾಡಲಾಗಿತ್ತು. ಪ್ರಸ್ತುತ, ಪರಿಸರ ಅಧಿಕಾರಿ, ಪ್ರಾದೇಶಿಕ ಕಚೇರಿ, ಕೊಪ್ಪಳ ರವರ ಪರಿವೀಕ್ಷಣಾ ವರದಿಯ (ದಿನಾಂಕ:02.06.2025) ಪ್ರಕಾರ, ಸದರಿ ಘಟಕಗಳು ಮಂಡಳಿಯು ನಿರ್ದಿಷ್ಟಪಡಿಸಿರುವ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅನುಪಾಲನೆ ಮಾಡುತ್ತಿರುವುದಾಗಿ ವರದಿಯಾಗಿರುತ್ತದೆ.</td></tr>
<tr><td>4</td><td>ಮೆ|| ಭದ್ರಶ್ರೀ ಸ್ಟೀಲ್ಸ್ & ಪವರ್ ಲಿಮಿಟೆಡ್,<br>ಕುಣಿಕೇರಿ ಗ್ರಾಮ ಕೊಪ್ಪಳ ತಾಲೂಕು ಮತ್ತು ಜಿಲ್ಲೆ</td></tr>
<tr><td>5</td><td>ಮೆ. ತನುಷ್ ಇಸ್ಪಾತ್ ಪ್ರೈವೇಟ್ ಮಿಟೆಡ್<br>ಘಟಕ-2, ಹಿರೇಬಹನಾಳ, ಕೊಪ್ಪಳ ತಾಲೂಕು ಮತ್ತು ಜಿಲ್ಲೆ.</td><td rowspan="4">ಈ 04 ಘಟಕಗಳು ಸಮ್ಮತಿ ಪತ್ರದ ಪ್ರಮುಖ ಷರತ್ತುಗಳನ್ನು ಉಲ್ಲಂಘನೆ ಮಾಡಿರುವುದು ಕಂಡುಬಂದ ಕಾರಣ, ಜಲ ಮತ್ತು ವಾಯು ಕಾಯ್ದೆ ಗಳ ಅಡಿಯಲ್ಲಿ, ದಿನಾಂಕ:02.11.2023 ರಂದು ಪ್ರಸ್ತಾವಿತ ನಿರ್ದೇಶನಗಳನ್ನು (Notice of Proposed Directions) ನೀಡಲಾಗಿತ್ತು.<br><br>ಮುಂದುವರೆದು, ಸದರಿ 04 ಘಟಕಗಳ ಪ್ರತಿನಿಧಿಗಳೊಂದಿಗೆ ಮಂಡಳಿಯು ದಿನಾಂಕ: 02.04.2024 & amp; 03.04.2024 ರಂದು ಮೌಖಿಕ ವಿಚಾರಣೆ ನಡೆಸಿದ್ದು, ಸದರಿ ಘಟಕಗಳು ಪ್ರಮುಖ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಂಡು ಅನುಪಾಲನೆ ಮಾಡುತ್ತಿರುವುದನ್ನು ಪರಿಗಣಿಸಲಾಗಿರುತ್ತದೆ.<br><br>ಪ್ರಸ್ತುತ, ಪರಿಸರ ಅಧಿಕಾರಿ, ಪ್ರಾದೇಶಿಕ ಕಚೇರಿ, ಕೊಪ್ಪಳ ರವರ ಪರಿವೀಕ್ಷಣಾ ವರದಿಗಳ (ದಿನಾಂಕ:20.06.2025, 03.07.2025 & 20.07.2024) ಪ್ರಕಾರ, ಸದರಿ ಘಟಕಗಳು ನಿರ್ದಿಷ್ಟಪಡಿಸಿರುವ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅನುಪಾಲನೆ ಮಾಡುತ್ತಿರುವುದಾಗಿ ವರದಿಯಾಗಿರುತ್ತದೆ.</td></tr>
<tr><td>6</td><td>ಮೆ|| ಐ. ಎಲ್ ಸಿ ಐರನ್ & ಸ್ಟೀಲ್ ಲಿಮಿಟೆಡ್,<br>ಕುಣಿಕೇರೆ ಗ್ರಾಮ ಕೊಪ್ಪಳ ತಾಲೂಕು ಮತ್ತು ಜಿಲ್ಲೆ.</td></tr>
<tr><td>7</td><td>ಮೆ|| ಧ್ರುವದೇಶ್ ಮೆಟಾ ಸ್ಟೀಲ್ ಪ್ರೈವೇಟ್ ಲಿಮಿಟೆಡ್,<br>ಹಿರೇಬಗನಾಳ ಗ್ರಾಮ, ಕೊಪ್ಪಳ ತಾಲೂಕು ಮತ್ತು ಜಿಲ್ಲೆ.</td></tr>
<tr><td>8</td><td>ಮೆ|| ಎಸ್ ಕೆ ಸ್ಟೀಲ್ಸ್,<br>ಹಾಲವರ್ತಿ ಗ್ರಾಮ, ಕೊಪ್ಪಳ ತಾಲೂಕು ಮತ್ತು ಜಿಲ್ಲೆ.</td></tr>
</table>

| | | |
|---|---|---|
| 9 | ಮೆ\|\| ವನ್ಯಾ ಸ್ಟೀಲ್ ಪ್ರೈವೇಟ್ ಲಿಮಿಟೆಡ್ ಯುನಿಟ್-೧, ಹಿರೇಬಗನಾಳ ಗ್ರಾಮ, ಕೊಪ್ಪಳ ತಾಲೂಕು ಮತ್ತು ಜಿಲ್ಲೆ. | ಈ 02 ಘಟಕಗಳು ಸಮ್ಮತಿ ಪತ್ರದ ಪ್ರಮುಖ ಷರತ್ತುಗಳನ್ನು ಉಲ್ಲಂಘನೆ ಮಾಡಿರುವುದು ಕಂಡುಬಂದ ಕಾರಣ, ಜಲ ಮತ್ತು ವಾಯು ಕಾಯ್ದೆ ಗಳ ಅಡಿಯಲ್ಲಿ, ದಿನಾಂಕ:02.11.2023 ರಂದು ಪ್ರಸ್ತಾವಿತ ನಿರ್ದೇಶನಗಳನ್ನು (Notice of Proposed Directions) ನೀಡಲಾಗಿತ್ತು.<br><br>ಮುಂದುವರೆದು, ಸದರಿ 02 ಘಟಕಗಳ ಪ್ರತಿನಿಧಿಗಳೊಂದಿಗೆ ಮಂಡಳಿಯು ದಿನಾಂಕ:02.04.2024 & 03.04.2024 ರಂದು ಮೌಖಿಕ ವಿಚಾರಣೆ ನಡೆಸಿದ್ದು, ಮುಂದಿನ ಕಾನೂನು ಕ್ರಮ ಕೈಗೊಳ್ಳುವ ನಿಮಿತ್ತ ದಿನಾಂಕ:16.04.2025 ರಂದು ನಡೆದ ರಾಜ್ಯ ಮಟ್ಟದ ಜಾರಿ ಸಮಿತಿ (SLEC) ಸಭೆಯಲ್ಲಿ ಚರ್ಚಿಸಿ ಮುಚ್ಚುವ ಆದೇಶವನ್ನು ಜಾರಿಗೊಳಿಸುವಂತೆ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.<br><br>ಉದ್ದಿಮೆದಾರರು, ಮೇಲ್ಕಾಣಿಸಿದ ಸಮಿತಿಯ ನಿರ್ಧಾರವನ್ನು ಪ್ರಶ್ನಿಸಿ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ W.P.No.13797/2025 ಸಲ್ಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:08.05.2025ರ ಆದೇಶದಲ್ಲಿ, "ಕಾನೂನಿನಲ್ಲಿ ನಿಗದಿಪಡಿಸಿರುವ ಸೂಕ್ತ ಕ್ರಮಗಳನ್ನು ಅನುಸರಿಸದೆ ಮಂಡಳಿಯು ಕೈಗಾರಿಕೆ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವಂತಿಲ್ಲ ಎಂದು ಆದೇಶಿಸಿದೆ" .<br><br>ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ, ಮಂಡಳಿಯು ಸದರಿ 02 ಘಟಕಗಳಿಗೆ, ಜಲ ಮತ್ತು ವಾಯು ಕಾಯ್ದೆಗಳ ಅಡಿಯಲ್ಲಿ ಪ್ರಸ್ತಾವಿತ ನಿರ್ದೇಶನಗಳನ್ನು (Notice of Proposed Directions), ದಿನಾಂಕ:17.01.2026 ರಂದು ಜಾರಿಗೊಳಿಸಿದೆ.<br><br>ಸದರಿ ಘಟಕಗಳು ಈಗಾಗಲೇ ಮಂಡಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಿದ್ದು, ಮಂಡಳಿ ವತಿಯಿಂದ ಪರಿಶೀಲಿಸಿ, ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು. |
| 10 | ಮೆ\|\| ವನ್ಯಾ ಸ್ಟೀಲ್ ಪ್ರೈವೇಟ್ ಲಿಮಿಟೆಡ್ಯುನಿಟ್-೨, ಹಿರೇಬಗನಾಳ ಗ್ರಾಮ, ಕೊಪ್ಪಳ ತಾಲೂಕು ಮತ್ತು ಜಿಲ್ಲೆ. | |

| | | |
|---|---|---|
| 11 | ಮೆ\|\| ಪಿ ಬಾಲ ಸುಬ್ಬ ಶೆಟ್ಟಿ ಪವರ್ & ಸ್ಟೀಲ್ ಲಿಮಿಟೆಡ್ ಘಟಕ-೧,<br>ಹಾಲವರ್ತಿ ಗ್ರಾಮ, ಕೊಪ್ಪಳ ತಾಲೂಕು ಮತ್ತು ಜಿಲ್ಲೆ. | ಈ 03 ಘಟಕಗಳು ಸಮ್ಮತಿ ಪತ್ರದ ಪ್ರಮುಖ ಷರತ್ತುಗಳನ್ನು ಉಲ್ಲಂಘನೆ ಮಾಡಿರುವುದು ಕಂಡುಬಂದ ಕಾರಣ, ಜಲ ಮತ್ತು ವಾಯು ಕಾಯ್ದೆ ಗಳ ಅಡಿಯಲ್ಲಿ, ದಿನಾಂಕ:02.11.2023 ರಂದು ಪ್ರಸ್ತಾವಿತ ನಿರ್ದೇಶನಗಳನ್ನು (Notice of Proposed Directions) ನೀಡಲಾಗಿತ್ತು.<br><br>ಮುಂದುವರೆದು, ಸದರಿ 03 ಘಟಕಗಳ ಪ್ರತಿನಿಧಿಗಳೊಂದಿಗೆ ಮಂಡಳಿಯು ದಿನಾಂಕ: 02.04.2024 & amp; 03.04.2024 ರಂದು ಮೌಖಿಕ ವಿಚಾರಣೆ ನಡೆಸಿದ್ದು, ಮುಂದಿನ ಕಾನೂನು ಕ್ರಮ ಕೈಗೊಳ್ಳುವ ನಿಮಿತ್ತ ದಿನಾಂಕ:16.04.2025 ರಂದು ನಡೆದ ರಾಜ್ಯ ಮಟ್ಟದ ಜಾರಿ ಸಮಿತಿ (SLEC) ಸಭೆಯಲ್ಲಿ ಚರ್ಚಿಸಿ ಮುಚ್ಚುವ ಆದೇಶವನ್ನು ಜಾರಿಗೊಳಿಸುವಂತೆ ಸಮಿತಿಯು ಶಿಫಾರಸ್ಸು ಮಾಡಿರುತ್ತದೆ.<br><br>ಮುಂದುವರೆದು, ಮಾನ್ಯ ಉಚ್ಚ ನ್ಯಾಯಾಲಯವು W.P.No.13797/2025ಗೆ ಸಂಬಂಧಪಟ್ಟಂತೆ ನೀಡಿರುವ ಆದೇಶವನ್ನು ಪರಿಗಣಿಸಿ, ಈ 03 ಘಟಕಗಳಿಗೆ ಮುಚ್ಚುವ ಆದೇಶವನ್ನು ಜಾರಿಗೊಳಿಸುವ ಮುನ್ನ, ಜಲ ಮತ್ತು ವಾಯು ಕಾಯ್ದೆಗಳ ಅಡಿಯಲ್ಲಿ ಹೊಸದಾಗಿ ಪ್ರಸ್ತಾವಿತ ನಿರ್ದೇಶನಗಳನ್ನು (Notice of Proposed Directions), ದಿನಾಂಕ:17.01.2026 ರಂದು ಜಾರಿಗೊಳಿಸಿದೆ.<br><br>ಸದರಿ ಪ್ರಸ್ತಾವಿತ ನಿರ್ದೇಶನಕ್ಕೆ, ಉದ್ದಿಮೆದಾರರು ಈಗಾಗಲೇ ಮಂಡಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಿದ್ದು, ಮಂಡಳಿ ವತಿಯಿಂದ ಪರಿಶೀಲಿಸಿ, ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು. |
| 12 | ಮೆ\|\| ಹೆಚ್ ಆರ್ ಜಿ ಅಲಾಯ್ಸ್ & ಸ್ಟೀಲ್ ಲಿಮಿಟೆಡ್,<br>ಹಿರೇಕಾಸನಕಂಡಿ ಗ್ರಾಮ, ಕೊಪ್ಪಳ ತಾಲೂಕು ಮತ್ತು ಜಿಲ್ಲೆ. | |
| 13 | ಮೆ. ಹೊಸಪೇಟೆ ಇಸ್ಪಾತ್ ಪ್ರೈವೇಟ್ ಲಿಮಿಟೆಡ್,<br>ಅಲ್ಲಾನಗರ, ಕೊಪ್ಪಳ ತಾಲೂಕು ಮತ್ತು ಜಿಲ್ಲೆ. | |